ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,

ಹೊನ್ನಾಳಿ

ಸಿ.ಸಿ. ನಂ. 1588/2021

ಪಿರ್ಯಾದುದಾರರು ಃ ಹೊನ್ನಾಳಿ ಪೊಲೀಸರು.

- ವಿರುದ್ಧ -

ಆರೋಪಿತರು ಃ 1. ನಾಗರಾಜ ಎಂ ಹೆಚ್ ಬಿನ್ ಮಹೇಶಪ್ಪ , 35 ವರ್ಷ

2. ಹರೀಶ ಎಂ ಹೆಚ್ ಬಿನ್ ಮಹೇಶಪ್ಪ , 28 ವರ್ಷ

ಇವರ ವಾಸಃ ಹೊಳೆಹರಳಹಳ್ಳಿ ಗ್ರಾಮ

ಹೊನ್ನಾಳಿ ತಾಲ್ಲೂಕು.

ದೋಷಾರೋಪಣೆ ಃ

ಶ್ರೀ ಮಂಜುನಾಥ ಆರ್. ಬಿ.ಎ.ಎಲ್., ಎಲ್‌ಎಲ್.ಬಿ. ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊನ್ನಾಳಿ ಆದ ನಾನು ಮಾಡಿದ ದೋಷಾರೋಪಣೆ ಏನೆಂದರೆಃ

ದಿನಾಂಕಃ 05-02-2021 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಹೊನ್ನಾಳಿ ಪೋಲೀಸ್ ಠಾಣಾ ಸರಹದ್ದಿನ ಹೊಳೆ ಹರಳಹಳ್ಳಿ ಗ್ರಾಮದ ಚಾಸಾ-1 ಪರಮೇಶ್ವರಪ್ಪ ರವರ ಜಮೀನು ಹಾಗೂ ಹೊನ್ನಾಳಿ ತುಮ್ಮಿನಕಟ್ಟೆ ನಡುವಿನ ಸಿಮೆಂಟ್ ರಸ್ತೆಯ ಪೂರ್ವ ದಿಕ್ಕಿನ ಕಡೆಗೆ ಆರೋಪಿತರಾದ ನೀವುಗಳು ಹಾಕಿದ್ದ ಕಲ್ಲುಗಳನ್ನು ತೆಗೆದುಕೊಳ್ಳಿ ಎಂದು ಚಾಸಾ-1, 4

ಮತ್ತು 5 ರವರಾದ ಪರಮೇಶ್ವರಪ್ಪ, ನರಸಿಂಹಪ್ಪ, ಚಂದ್ರಪ್ಪ ರವರು ಹೇಳಿದಾಗ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಅವರಿಗೆ ಏನ್ರೋ ಸೂಳೇಮಕ್ಕಳಾ ನಿಮ್ದು, ನಿಮ್ಮ ಜಮೀನಿನನಲ್ಲಿ ಕಲ್ಲು ಹಾಕಿಲ್ಲ ನಮ್ಮ ಜಮೀನಿನಲ್ಲಿ ಹಾಕಿದ್ದೇವೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ . ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.504 ಸಹವಾಚಕ 34 ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

2. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಚಾಸಾ-1 ಎಡಭಾಗಕ್ಕೆ ಕುಡುಗೋಲಿನಿಂದ ಹೊಡೆದು , 2 ನೇ ಆರೋಪಿಯಾದ ನೀವು ಚಾಸಾ-5 ರವರಿಗೆ ಕೋಲಿನಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.324 ಸಹವಾಚಕ 34 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

3. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ, ಚಾಸಾ-1 ಮತ್ತು 4 ರವರ ಮೈ ಕೈ ಹೊಡೆದು ನೋವುಂಟುಪಡಿಸಿರುತ್ತೀರಿ . ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.323 ಸಹವಾಚಕ 34 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

4. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ- 1 ರವರಿಗೆ ಕೊಲೆ ಮಾಡುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ . ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.506 ಸಹವಾಚಕ ಕಲಂ.34 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಮೇಲೆ ತಿಳಿಸಿದ ಆರೋಪಣೆಯ ಎಲ್ಲಾ ಸಾರಾಂಶ ತಿಳಿಯಿತೇ?

ಉತ್ತರಃ ಆ1- ಆ2-

ಪ್ರಶ್ನೆ 2ಃ- ನೀವು ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

ಉತ್ತರಃ ಆ1- ಆ2-

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗಳಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ಸ್ಥಳ ಃ ಹೊನ್ನಾಳಿ

ದಿನಾಂಕಃ 15-12-2022.

(ಶ್ರೀ ಮಂಜುನಾಥ ಆರ್.)
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಹೊನ್ನಾಳಿ.